<u>ಅಸಲು ದಾವಾಃ</u> - 326/2022 ಡಿ.ಡಬ್ಲ್ಯೂಃ- 1

ದಿನಾಂಕಃ 30.06.2026 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ- ವಾದಿ ಪರ ಶ್ರೀ.ಕೆ ಟಿ ಪಿ ವಕೀಲರಿಂದ</u>

ವಿದ್ಯಾಭ್ಯಾಸ ಮಾಡಿದ್ದೀರಾ ಎಂದರೆ ಇಲ್ಲ. ಗಂಗಪ್ಪ ಅಲಿಯಾಸ್ ಉಮ್ಮಿ ಗಂಗಪ್ಪರವರಿಗೆ ನನ್ನ ಗಂಡ ನಾಗಪ್ಪ ಹಾಗೂ ಪ್ರತಿವಾದಿಗಳು ನಾಲ್ಕು ಜನ ಮಕ್ಕಳು ಎಂದರೆ ಸರಿ. ನನ್ನ ಗಂಡ ತೀರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ಗಂಡ ತೀರಿಕೊಂಡು ಎಷ್ಟು ವರ್ಷ ಆಯಿತು ಎಂದರೆ ಸುಮಾರು 12-13 ವರ್ಷ ಆಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ನನ್ನ ಮಾವ ಗಂಗಪ್ಪ ಅಲಿಯಾಸ್ ಉಮ್ಮಿ ಗಂಗಪ್ಪರವರಿಗೆ 1997-98 ರ ಸಾಲಿನಲ್ಲಿ ಮಂಜೂರಾದ ಆಸ್ತಿ ಎಂದರೆ ಸರಿ. ಆ ರೀತಿ ಮಂಜೂರಾದ ನಂತರ ನನ್ನ ಮಾವ ಗಂಗಪ್ಪ ಅಲಿಯಾಸ್ ಉಮ್ಮಿ ಗಂಗಪ್ಪರವರಿಗೆ ಎಂ ಆರ್ 23/1997-98 ರಂತೆ ಮ್ಯುಟೇಷನ್ ಸಹ ಆಗಿರುತ್ತದೆ ಎಂದರೆ ಸರಿ. ನನ್ನ ಮಾವ 2007 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ಮಾವ ತೀರಿಕೊಂಡ ನಂತರ ನನ್ನ, ಉಳಿದ ಪ್ರತಿವಾದಿಗಳು ಹಾಗೂ ವಾದಿಯ ಜಂಟಿ ಹೆಸರಿಗೆ ಎಂ ಆರ್ ನಂ.ಹೆಚ್ 8/2022-23 ರಂತೆ ದಾವಾ ಸ್ವತ್ತಿನ ಖಾತೆ ಆಗಿರುತ್ತದೆ ಎಂದರೆ ಸರಿ. ಈಗಲೂ ಸಹ ದಾವಾ ಆಸ್ತಿಯು ನಮ್ಮೆಲ್ಲರ ಜಂಟಿ ಖಾತೆಯಲ್ಲಿದೆ ಎಂದರೆ ಸರಿ. ಗಂಗಪ್ಪ ಅಲಿಯಾಸ್ ಉಮ್ಮಿ ಗಂಗಪ್ಪರವರ ಹೆಂಡತಿಯ ಹೆಸರು ಬಸಮ್ಮ ಎಂದರೆ ಸರಿ. ಸದರಿ ಬಸಮ್ಮ ರವರು ಸಹ 1975 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ.

ಗಂಗಪ್ಪ ಅಲಿಯಾಸ್ ಉಮ್ಮಿ ಗಂಗಪ್ಪ ಮತ್ತು ಬಸಮ್ಮರವರ ವಾರಸುದಾರರು ವಾದಿ ಮತ್ತು ಪ್ರತಿವಾದಿಗಳು ಎಂದರೆ ಸರಿ. ದಾವಾ ಆಸ್ತಿಯ ಸರ್ವೆ ನಂ.51 ರಲ್ಲಿ ವಾದಿ ಮತ್ತು ಪ್ರತಿವಾದಿಗಳೆಲ್ಲರಿಗೂ ಸಮ ಹಿಸ್ಸೆ ಇದೆ ಎಂದರೆ ಸರಿ ಮುಂದುವರೆದು ಸಾಕ್ಷಿಯು ವಾದಿ ಮತ್ತು 3 ನೇ ಪ್ರತಿವಾದಿಗೆ ಮದುವೆ ಮಾಡಿ ಆ ಸಮಯದಲ್ಲಿ ಎಲ್ಲಾ ಕೊಟ್ಟು ಕಳುಹಿಸಿದ್ದೆವು ಈಗ ನಾವು ಭಾಗ ಮಾಡಿಕೊಳ್ಳುತ್ತಿದ್ದಾಗ ನಮಗೂ ಬೇಕು ಎಂದು ಅವರು ಬಂದಿರುತ್ತಾರೆ ಎಂದು ನುಡಿಯುತ್ತಾರೆ.

ವಾದಿಯ ಮದುವೆಯ ಕಾಲಕ್ಕೆ ನನಗಿನ್ನು ಮದುವೆ ಆಗಿರಲಿಲ್ಲ ಎಂದರೆ ಸರಿ. ನನ್ನ ಮದುವೆಯ ಪೂರ್ವದಲ್ಲಿಯೇ ವಾದಿಯ ಮದುವೆಯಾಗಿದ್ದರಿಂದ ಆಗಿನ ಕಾಲದ ನಮ್ಮ ಮನೆಯ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ.

3 ನೇ ಪ್ರತಿವಾದಿಗೆ ಯಾವಾಗ ಮದುವೆಯಾಗಿರುತ್ತದೆ ಎಂದರೆ ಗೊತ್ತಿಲ್ಲ. 3 ನೇ ಪ್ರತಿವಾದಿಗೆ ಮದುವೆ ಆಗುವ ಸಮಯದಲ್ಲಿ ನಾನು ಎಲ್ಲಿದ್ದೆ ಎಂದರೆ ಸಾಕ್ಷಿಯು ಹೆರಿಗೆಯಾಗಿ ತವರು ಮನೆಯಲ್ಲಿದ್ದೆ ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿಯ ಮದುವೆಯ ಮಾತುಕತೆಯ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತು ನಾನು ಹಾಜರಿದ್ದೆ ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿಯ ಮದುವೆಯ ಮಾತುಕತೆ ಏನು ನಡೆಯಿತು ಎಂದರೆ ಸಾಕ್ಷಿಯು ಮದುವೆ ಮಾಡಲು ಅವರಿಗೆ ಹಣ ಇರಲಿಲ್ಲದ ಕಾರಣ ವಾದಿಗೆ ಜಮೀನನ್ನು ನೀಡಿ ಅವರೇ ಮದುವೆಯ ಖರ್ಚನ್ನು ನಿಭಾಯಿಸುವಂತೆ ಮಾತುಕತೆ ಆಗಿತ್ತು ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿಯ ಮದುವೆಯನ್ನು ವಾದಿಯೇ ಮಾಡಿದ್ದಾರಾ ಎಂದರೆ ಹೌದು. 3 ನೇ ಪ್ರತಿವಾದಿಗೆ ಏನುಕೊಟ್ಟು ವಾದಿಯು ಮದುವೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ನಮ್ಮ ಕುಟುಂಬದಲ್ಲಿ ಇದುವರೆಗೂ ನೋಂದಾಯಿತ ಪಾಲು ವಿಭಾಗ ಆಗಿಲ್ಲ ಎಂದರೆ ಸರಿ. ನಿಡಿ 1 ದಾಖಲೆಯನ್ನು ನಾನು ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನಿಡಿ 1 ರಲ್ಲಿ ಪುಟ್ಟಪ್ಪ ಬಿನ್ ಬಸಣ್ಣ ಎಂದು ನಮೂದು ಇದ್ದು ಅವರು ಯಾರು ಎಂದರೆ ಸಾಕ್ಷಿಯು ನನ್ನ ಮಾವನ ತಂಗಿ ಎಂದು ನುಡಿಯುತ್ತಾರೆ. ಚನ್ನಮ್ಮ ಬಿನ್ ಲೇಟ್ ಗಂಗಪ್ಪ ಎಂದು ನಮೂದಿದ್ದು ಅವರು ಯಾರು ಎಂದು ಸಾಕ್ಷಿಯು 3 ನೇ ಪ್ರತಿವಾದಿಯ ಹೆಸರನ್ನೇ ಚನ್ನಮ್ಮ ಎಂತಲೂ ಕರೆಯುತ್ತೇವೆ ಎಂತಲೂ ಕರೆಯುತ್ತೇವೆ. ಚನ್ನಮ್ಮರವರೇ 3 ನೇ ಪ್ರತಿವಾದಿ ಮೀನಾಕ್ಷಮ್ಮ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ ಪುಟ್ಟಮ್ಮ ಬಿನ್ ಬಸಣ್ಣರವರನ್ನು ಕೌಂಟರ್ ಕ್ಲೈಮ್ ನಲ್ಲಿ ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಸಾಕ್ಷಿಯು ಅವರು ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ತಕರಾರಿನಲ್ಲಿ ಮತ್ತು ಕೌಂಟರ್ ಕ್ಲೈಮ್ ನಲ್ಲಿ ಪುಟ್ಟಮ್ಮರವರು ಯಾರು ಎಂದು ತಿಳಿಸಿಲ್ಲ ಎಂದರೆ ಸರಿ. ನಿಡಿ 1 ರ ದಾಖಲೆಯ ಸ್ವತ್ತಿನ ವಿಸ್ತೀರ್ಣ ಎಷ್ಟು ಎಂದರೆ ಅಗಲ 2 ಅಂಕಣ, ಉದ್ದ 150 ಅಡಿ ಇರಬಹುದು ಎಂದು ನುಡಿಯುತ್ತಾರೆ. ಕೌಂಟರ್ ಕ್ಲೈಮ್ ಸ್ವತ್ತು ಯಾವ ಹೆಸರಿಗೆ ಇರುತ್ತದೆ ಎಂದರೆ ಗೊತ್ತಿಲ್ಲ. ಕೌಂಟರ್ ಕ್ಲೈಮ್ ಸ್ವತ್ತು ಈ ಮೊದಲು ಯಾರ ಹೆಸರಿಗೆ ಇತ್ತು ಎಂದು ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಕೌಂಟರ್ ಕ್ಲೈಮ್ ಸ್ವತ್ತಿನ ಜಂಟಿ ಖಾತೆ ಮಾಡುವಂತೆ ಯಾರು ಅರ್ಜಿ ನೀಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಮಗನಿಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಯಾವ ವರ್ಷ ನನ್ನ ಮಗ ಅರ್ಜಿ ನೀಡಿರುತ್ತಾರೆ ಎಂದರೆ ಸಾಕ್ಷಿ 3 ವರ್ಷ ಆಗಿರುತ್ತದೆ ಎಂದು ನುಡಿಯುತ್ತಾರೆ. ಕೌಂಟರ್ ಕ್ಲೈಮ್ ಶೆಡ್ಯೂಲ್ ಸ್ವತ್ತು ನಮ್ಮ ಒಟ್ಟು ಕುಟುಂಬದ ಸ್ವತ್ತು ಅಲ್ಲದಿದ್ದರೂ ನಾವು ಪ್ರಭಾವ ಬೀರಿ ನಮ್ಮ ಹೆಸರಿಗೆ ಜಂಟಿ ಖಾತೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮಾತ್ರ ನಮ್ಮ ಒಟ್ಟು

ಕುಟುಂಬದ ಆಸ್ತಿಯಾಗಿದ್ದು ಕೌಂಟರ್ ಕ್ಲೈಮ್ ಶೆಡ್ಯೂಲ್ ಆಸ್ತಿಯು ನಮ್ಮ ಒಟ್ಟು ಕುಟುಂಬದ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ಕೌಂಟರ್ ಕ್ಲೈಮ್ ಶೆಡ್ಯೂಲ್ ಆಸ್ತಿಯು ಗಂಗಪ್ಪ ಅಲಿಯಾಸ್ ಉಮ್ಮಿ ಗಂಗಪ್ಪರವರ ಹೆಸರಿಗೆ ಇತ್ತು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಗೊತ್ತಿಲ್ಲ.

ಕೌಂಟರ್ ಕ್ಲೈಮ್ ಶೆಡ್ಯೂಲ್ ಆಸ್ತಿಯು ನಮ್ಮ ಒಟ್ಟು ಕುಟುಂಬದ ಆಸ್ತಿ ಎಂದು ತೋರಿಸಲು ಸರಿಯಾದ ದಾಖಲೆಗಳು ಇಲ್ಲದ ಕಾರಣ ವಾದಿಯು ದಾವಾ ಆಸ್ತಿಯ ಮೇಲೆ ಮಾತ್ರ ದಾಖಲೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ಮದುವೆ ಸಮಯದಲ್ಲಿ ವಾದಿಗೆ ಹಣ ಮತ್ತು ಬಂಗಾರದ ಒಡವೆಗಳನ್ನು ನೀಡಿದ್ದೇವೆ ಎಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಸುಳ್ಳು ಬರೆಸಿದ್ದೇವೆ ಎಂದರೆ ಸರಿಯಲ್ಲ. ವಾದಿಗೆ ಹಣ ಮತ್ತು ಬಂಗಾರದ ಒಡವೆಗಳನ್ನು ನೀಡಿದ್ದೇವೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸಾಕ್ಷಿಯು ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ಯಾರಿಗೆ ಕೊಟ್ಟಿದ್ದೀರಾ ಎಂದರೆ ವಾದಿಗೆ ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ದಾವೆಯ ಬಗ್ಗೆ ಸರಿಯಾದ ಮಾಹಿತಿ ಇಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ